# ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ

**:: ಉಪಸ್ಥಿತರು ::**

ಶ್ರೀ. ವೆಂಕಟೇಶ. ಎನ್ ಬಿ.ಎ.ಎಲ್.ಎಲ್.ಬಿ
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ದೇವನಹಳ್ಳಿ.

**ಅಪರಾಧಿಕ ಪ್ರಕರಣ ಸಂಖ್ಯೆಃ 3404/2023**

**ತೀರ್ಪಿನ ದಿನಾಂಕಃ 30ನೇ ಜೂನ್ ಮಾಹೆ 2026ನೇ ಇಸವಿ.**

**ಪಿರ್ಯಾದಿದಾರ/ರು** : ಕರ್ನಾಟಕ ಸರಕಾರವನ್ನು ಪ್ರತಿನಿಧಿಸುವವರು
ಆರಕ್ಷಕ ನೀರಿಕ್ಷಕರು,
ಚಿಕ್ಕಜಾಲ ಪೋಲಿಸ್ ಠಾಣೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ .

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**: ವಿರುದ್ಧ :**

**ಆರೋಪಿತ/ರು:** ಎಮ್. ಸುದರ್ಶನ್ ಬಿನ್ ಶೇಖರ್ ರೆಡ್ಡಿ,
ವಾಸಃ ನಂ. 23/118, ಭಾರ್ಗವಿ ನಗರ,
ಆತ್ಮಕೂರ್ ಮಂಡಲಂ ಅಮರಚಿಂತ ಆತ್ಮಕೋರ್,
ಮರಿಕಲ್, ತೆಲಂಗಾಣ.

**(ಆರೋಪಿತನ ಪರ - ಶ್ರೀ. ಎಮ್. ಎಸ್ - ವಕೀಲರು)**

| | | |
|---|---|---|
| 1 | ಅಪರಾಧ ಘಟಿಸಿದ ದಿನಾಂಕ | 18-11-2020 |
| 2 | ಅಪರಾಧ ವರದಿಯಾದ ದಿನಾಂಕ | 31-05-2023 |
| 3 | ಪಿರ್ಯಾದುದಾರರ ಹೆಸರು | ಶ್ರೀಮತಿ. ಅನುಷಾ ಬೈಟಿಕಲಿ ಕೋಂ ಎಂ ಸುದರ್ಶನ್ |
| 4 | ಆರೋಪಿತನ ಬಂಧನದ ದಿನಾಂಕ | ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾನೆ. |

| | | |
|---|---|---|
| 5 | ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ | 23-06-2026 |
| 6 | ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ದಿನಾಂಕ | 23-06-2026 |
| 7 | ದೂರು ನೀಡಿದ ಅಪರಾಧದ ಕಲಮುಗಳು | ಭಾ.ದಂ.ಸಂ. ಕಲಂ. 498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 |
| 8 | ನ್ಯಾಯಾಧೀಶರ ತೀರ್ಪಿನ ಅಭಿಪ್ರಾಯ | ಅಂತಿಮ ಆದೇಶದಂತೆ |
| 9 | ಫಿರ್ಯಾದುದಾರರ ಪರ ವಾದ ಮಂಡಿಸಿದವರು | ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು. |
| 10 | ಆರೋಪಿತನ ಪರ ವಾದ ಮಂಡಿಸಿದವರು | **ಶ್ರೀ. ಎಂ. ಎಸ್ - ವಕೀಲರು.** |

-

**(ಶ್ರೀ.ವೆಂಕಟೇಶ. ಎನ್)**
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ತೀರ್ಪು**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚಿಕ್ಕಜಾಲ ಆರಕ್ಷಕ ಠಾಣೆಯ ಸರಹದ್ದಿಗೆ ಸೇರಿದ, ಚಿಕ್ಕಜಾಲ ಆರಕ್ಷಕ ಠಾಣೆಯಲ್ಲಿ ದಾಖಲಾದ ಪ್ರಕರಣದ ಕುರಿತು ಚಿಕ್ಕಜಾಲ ಆರಕ್ಷಕ ಠಾಣೆಯ ಆರಕ್ಷಕ ನೀರಿಕ್ಷಕರು ಆರೋಪಿತನ ವಿರುದ್ಧ ಭಾ.ದಂ.ಸಂ. ಕಲಂ. 498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿ ಆರೋಪಿತನು ಅಪರಾಧ ಮಾಡಿದ್ದಾನೆಂದು ಅವನ ವಿರುದ್ಧ ಶಿಕ್ಷಾರ್ಹ ಅಪರಾಧಗಳಿಗಾಗಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪ್ರಕರಣದ ಸಂಕ್ಷೀಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ:

ಸಾಕ್ಷಿ-1 ರವರು ಚಾಸಾ-4 ಮತ್ತು 5 ರವರ ಮಗಳಾಗಿರುತ್ತಾರೆ. ಚಾಸಾ-4 ಮತ್ತು 5 ರವರು ಆರೋಪಿಯೊಂದಿಗೆ ದಿನಾಂಕ: 18-11-2020 ರಂದು ಮದುವೆ ಮಾಡಿಕೊಟ್ಟಿದ್ದು, ಮದುವೆಯ ಸಮಯದಲ್ಲಿ ವರನಿಗೆ 5,00,000/- ನಗದು, 60 ಗ್ರಾಂ ತೂಕದ ಚಿನ್ನದ ಒಡವೆ ಹಾಗೂ ಕೆಎ-03-ಕೆ.ಹೆಚ್-0466 ನೊಂದಣೆ ಸಂಖ್ಯೆಯ ದ್ವಿಚಕ್ರ ವಾಹನವನ್ನು ನೀಡಿದ್ದಾಗ್ಯೂ ಸಹ, ಆರೋಪಿ ಮದುವೆಯಾದ ಒಂದು-ಎರಡು ವಾರಗಳ ನಂತರದ ದಿನಗಳಲ್ಲಿ ಚಾಸಾ-1 ರವರೊಂದಿಗೆ ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಮಾಡುತ್ತ. ನಿನಗೆ ಮನೆ ಕೆಲಸ ಸರಿಯಾಗಿ ಬರುವುದಿಲ್ಲವೆಂದು ಚಿಕ್ಕ ಚಿಕ್ಕ ವಿಷಯಗಳಿಗೆ ಚಾಸಾ-1 ರವರನ್ನು ಹಿಯಾಳಿಸುವುದು ದೈಹಿಕವಾಗಿ ಮಾನಸೀಕವಾಗಿ ಹಿಂಸೆ ನೀಡಿದ್ದಲ್ಲದೇ, ಆರೋಪಿ ಬೆಂಗಳೂರಿನಲ್ಲಿ ಮನೆ ಮಾಡಿಕೊಡುವಂತೆ ಬೇಡಿಕೆ ಇಟ್ಟಿದ್ದು, ಚಾಸಾ-4 ರವರು ದಿ. 15-04-2021 ರಂದು ಚಿಕ್ಕಜಾಲ ಪೋಲಿಸ್ ಠಾಣಾ ಸರಹದ್ದಿನ ಸಾಯಿ ನಿವಾಸ್, ಬೃಂದಾನವನ ಬಡಾವಣೆ, ಬ್ರೀಡ್ಜ್ ಹೋಟೆಲ್ ಹತ್ತಿರ ವಿದ್ಯಾನಗರ ಕ್ರಾಸ್ ನಲ್ಲಿ 6 ಲಕ್ಷ ರೂಪಾಯಿ ಕೊಟ್ಟು ಮನೆಯನ್ನು ಭೋಗ್ಯಕ್ಕೆ ಹಾಕಿಸಿಕೊಟ್ಟಿರುತ್ತಾರೆ. ಅಲ್ಲಿ ಸಹಾ ಆರೋಪಿ ಮಧ್ಯಪಾನ ಮಾಡಿಕೊಂಡು ಮನೆಗೆ ಬಂದು ಚಾಸಾ-1 ರವರ ಮೇಲೆ ಅನುಮಾನ ಪಡುವುದು, ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಮಾಡಿ ಮಾನಸಿಕ ಹಿಂಸೆ ನೀಡಿ ಮನೆಯಿಂದ ವರದಕ್ಷಿಣೆ ರೂಪದಲ್ಲಿ ತವರು ಮನೆಯಿಂದ ಹಣ ತರುವಂತೆ ಒತ್ತಾಯ ಮಾಡುತ್ತಿದ್ದು, ಇದಕ್ಕೆ ಚಾಸಾ-1 ರವರು ಒಪ್ಪದಿದ್ದಾಗ ದಿ. 24-08-2021 ರಂದು ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದು ನೋವುಂಟು ಮಾಡಿ ದೈಹಿಕವಾಗಿ ಮಾನಸಿಕವಾಗಿ ಹಿಂಸೆ ನೀಡಿ ವರದಕ್ಷಿಣೆ ರೂಪದಲ್ಲಿ ಮನೆಯಿಂದ ಹಣ ತರದೇ ಇದ್ದರೆ ಸಾಯಿಸುವುದಾಗಿ ಪ್ರಾಣಬೆದರಿಕೆ ಹಾಕಿ

ವರದಕ್ಷಿಣೆ ರೂಪದಲ್ಲಿ ಪ್ಲಾಟ್ ಕೊಡಿಸುವಂತೆ ಒತ್ತಾಯ ಮಾಡಿರುವುದು ತನಿಖೆಯಿಂದ ದೃಡಪಟ್ಟಿರುತ್ತೆಂದು, ಆ ಮೂಲಕ ಭಾ.ದಂ.ಸಂ. ಕಲಂ. 498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿ ಆರೋಪಿ ಅಪರಾಧವನ್ನು ಎಸಗಿರುತ್ತಾನೆಂದು ಅಪಾಧಿಸಲಾಗಿರುತ್ತದೆ.

**3.** ಚಾ.ಸಾ-1 ರವರು ನೀಡಿದ ದೂರನ್ನು ಚಾಸಾ-11 ರವರು ಸ್ವೀಕರಿಸಿ ಆರೋಪಿತನ ವಿರುದ್ಧ ಚಿಕ್ಕಜಾಲ ಪೋಲೀಸ್ ಠಾಣೆಯ ಗುನ್ನಾ ನಂ. 73/2023 ನೇದ್ದರಂತೆ ಪ್ರ.ವ.ವರದಿ ದಾಖಲಿಸಿ, ಚಾಸಾ-12 ರವರು ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿತನ ವಿರುದ್ದ ಭಾ.ದಂ.ಸಂ. ಕಲಂ.498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿ ಅಂತಿಮ ಆರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**4.** ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿದ ನಂತರ ಆರೋಪಿತನ ವಿರುದ್ದ ಹೊರಸಿರುವ ಆರೋಪಗಳನ್ನು ರುಜುವಾತು ಪಡಿಸಲು ಸಾಕ್ಷ್ಯಾಧಾರಗಳು ಇರುವುದರಿಂದ ಆರೋಪಗಳ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತನ ವಿರುದ್ದ ಅಪರಾಧಿಕ ಪ್ರಕರಣವನ್ನು ದಾಖಲಿಸಿ ಆರೋಪಿತನಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಗೋಳಿಸಿದ ಮೇರೆಗೆ, ಆರೋಪಿತನು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾನೆ. ಆರೋಪಿತನಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.207ರ ಅಡಿಯಲ್ಲಿ ನಿರ್ದೇಶಿಸಿರುವಂತೆ ಆರೋಪಿತನಿಗೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಪೂರೈಸಲಾಗಿರುತ್ತದೆ.

**5.** ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ಉಭಯ ಪಕ್ಷಗಾರರ

ವಾದವನ್ನು ಆಲಿಸಲಾಯಿತು. ಆದರೆ ನ್ಯಾಯಾಲಯಕ್ಕೆ ಆರೋಪಿತನನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ ಮತ್ತು ದೋಷಾರೋಪಣೆ ಪಟ್ಟಿಯಲ್ಲಿ ಆರೋಪಿತನ ವಿರುದ್ದ ಸಾಕಷ್ಟು ಅಂಶಗಳು ಕಂಡು ಬಂದಿದ್ದರಿಂದ ಮೇಲ್ಕಾಣಿಸಿದ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಲಾಯಿತು.

**6.** ತದನಂತರ ಆರೋಪಿತನ ವಿರುದ್ದ ರಚಿಸಲಾದ ಭಾ.ದಂ.ಸಂ. ಕಲಂ. ಕಲಂ.498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿನ ದೋಷಾರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದಾಗ, ಆರೋಪಿತನು ತನ್ನ ಮೇಲೆ ಹೊರೆಸಿರುವ ಆರೋಪಣೆಗಳು ಸುಳ್ಳು ಎಂದು, ತಾನು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**7.** ಅಭಿಯೋಜನೆಯು ಆರೋಪಿತನ ವಿರುದ್ದ ಮಾಡಿರುವ ಆರೋಪಗಳನ್ನು ನಿಸ್ಸಂದೆಹತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಇಬ್ಬರೂ ಸಾಕ್ಷಿದಾರರನ್ನು ಪ್ರಾಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ ಹಾಗೂ ತಮ್ಮ ಪರವಾಗಿ ಒಟ್ಟು 4 ದಾಖಲೆಗಳನ್ನು ನಿ.ಪಿ-1 ರಿಂದ 4 ಎಂದು ನಿಶಾನೆಗೊಳಪಡಿಸಿರುತ್ತದೆ. ಅಭಿಯೋಜನೆಯ ಪ್ರಕರಣದ ಸಾಕ್ಷಿದಾರರಾದ ಪ್ರಾಸಾ-1 ಮತತು 2 ರವರು ಈ ಪ್ರಕರಣದ ಪಿರ್ಯಾಧಿ, ನೊಂದ ಮತ್ತು ಪ್ರತ್ಯಕ್ಷ, ಪಂಚನಾಮೆ ಸಾಕ್ಷಿದಾರರಾಗಿರುತ್ತಾರೆ. ಪ್ರಾಸಾ-1 ಮತ್ತು 2 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದ ಕಾರಣ, ಚಾಸಾ-2, 3, 5 ರಿಂದ 12 ರವರೆಗಿನ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ಸಹಾಯವಾಗುವುದಿಲ್ಲವೆಂದು ಕಂಡು ಬಂದ ಕಾರಣ ನ್ಯಾಯಾಲಯವು ಮಾನ್ಯ

ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ.

**8.** ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾ.ಸಾ-1 ಮತ್ತು 2 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನೀಡಿರುವುದರಿಂದ ಮತ್ತು ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತನಿಗೆ ವ್ಯತಿರಿಕ್ತವಾದ ಯಾವುದೇ ಸಾಕ್ಷ್ಯ ಇಲ್ಲದ ಕಾರಣ, ಅಪರಾಧಿಕ ಪ್ರಕ್ರಿಯಾ ಸಂಹಿತೆ 1973ರ ಕಲಂ. 313 ರ ಅಡಿಯಲ್ಲಿ ಆರೋಪಿತನನ್ನು ಪ್ರಶ್ನಿಸಿ ಅವನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**9.** ಪ್ರಕರಣದ ವಿಚಾರಣೆಯ ತರುವಾಯ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ಮತ್ತು ಆರೋಪಿತನ ಪರ ವಕೀಲರ ವಾದವನ್ನು ಸುನಾವಣೆ ಮಾಡಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

**10.** ಅಭಿಯೋಜನೆಯು ಆರೋಪಿತನ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉಗಮವಾಗಿರುತ್ತವೆ.

**:: ಅಂಶಗಳು ::**

**ಅಂಶ ಸಂಖ್ಯೆ :1:** ಚಾಸಾ-1 ರವರು ದಿನಾಂಕ. 18-11-2020 ರಂದು ಮದುವೆಯಾಗಿದ್ದು, ಮದುವೆಯ ಸಮಯದಲ್ಲಿ ಆರೋಪಿಗೆ ರೂ.5,00,000/- ನಗದು, 60 ಗ್ರಾಂ ತೂಕದ ಚಿನ್ನದ ಒಡವೆ ಹಾಗೂ ಕೆಎ-03-ಕೆಹೆಚ್-0466 ನೊಂದಣಿ ದ್ವಿಚಕ್ರ ವಾಹನವನ್ನು ನೀಡಿದ್ದು, ಮದುವೆಯಾದ ಒಂದೆರಡು ವಾರದ ನಂತರ ಆರೋಪಿ ಚಾಸಾ-1 ರವರಿಗೆ ಸಣ್ಣಪುಟ್ಟ

ವಿಚಾರಗಳಿಗೆ ಗಲಾಟೆ ಮಾಡಿ, ನಿನಗೆ ಮನೆ ಕೆಲಸ ಬರುವುದಿಲ್ಲವೆಂದು ಚಿಕ್ಕ ಚಿಕ್ಕ ವಿಷಯಗಳಿಗೆ ಚಾಸಾ-1 ರವರನ್ನು ಹಿಯಾಳಿಸಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ ಮತ್ತು ದಿ. 15-04-2021 ರಂದು ಚಿಕ್ಕಜಾಲ ಪೋಲೀಸ್ ಠಾಣಾ ಸರಹದ್ದಿನ ವಿದ್ಯಾನಗರ ಕ್ರಾಸ ಹತ್ತಿರ ಮನೆಯನ್ನು ಚಾಸಾ-1 ರವರ ತಂದೆ ಚಾಸಾ-4 ರವರು ರೂ. 6,00,000/- ಗಳಿಗೆ ಭೋಗ್ಯಕ್ಕೆ ಹಾಕಿಸಿಕೊಟ್ಟಿದ್ದು, ಅಲ್ಲಿಯೂ ಸಹ ಆರೋಪಿ ಮದ್ಯಪಾನ ಮಾಡಿ ಚಾಸಾ-1 ರವರ ಮೇಲೆ ಗಲಾಟೆ ಮಾಡಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡಿರುತ್ತಾರೆಂದು. ಆ ಮೂಲಕ ಭಾ.ದಂ.ಸಂ. ಕಲಂ 498(ಎ) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ : 2 :** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದಿ. 24-08-2021 ರಂದು ಚಾಸಾ-1 ರವರಿಗೆ ಹೆಚ್ಚಿನ ಹಣ ತವರು ಮನೆಯಿಂದ ತರುವಂತೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು. ಆ ಮೂಲಕ ಭಾ.ದಂ.ಸಂ. ಕಲಂ.323 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ : 3 :** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ವರದಕ್ಷಿಣೆ ರೂಪದಲ್ಲಿ ಮನೆಯಿಂದ

ಹಣ ತರದೇ ಇದ್ದರೆ ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು. ಆ ಮೂಲಕ ಭಾ.ದಂ.ಸಂ. ಕಲಂ.506 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ : 4 :** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಮದುವೆಯ ಸಮಯದಲ್ಲಿ ರೂ.5,00,000/- ನಗದು, 60 ಗ್ರಾಂ ತೂಕದ ಚಿನ್ನದ ಒಡವೆ ಹಾಗೂ ಕೆಎ-03-ಕೆಹೆಚ್-0466 ನೊಂದಣಿ ದ್ವಿಚಕ್ರ ವಾಹನ ಮತ್ತು ಚಾಸಾ-4 ರವರು ಚಾಸಾ-1 ರವರ ಸಂಸಾರ ಚೆನ್ನಾಗಿ ಇರಲೆಂದು ನೀಡಿದ ರೂ. 2,00,000/- ವನ್ನು ವರದಕ್ಷಿಣೆಯಾಗಿ ಪಡೆದುಕೊಂಡಿರುತ್ತಾರೆಂದು. ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ. 3 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ : 5 :** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ-1 ರವರಿಗೆ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆಗಾಗಿ ಹಣ ತರುವಂತೆ ಒತ್ತಾಯ ಮಾಡಿ ವರದಕ್ಷಿಣೆ ಬೇಡಿಕೆ ಇಟ್ಟಿರುತ್ತಾರೆಂದು. ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ. 4 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ

ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ ?

**ಅಂಶ ಸಂಖ್ಯೆ : 6 :** ಆದೇಶ ಏನು ?

**11.** ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಉತ್ತರ ನೀಡಿರುತ್ತದೆ ;

ಅಂಶ ಸಂಖ್ಯೆ :1: ನಕಾರಾತ್ಮಕವಾಗಿ

ಅಂಶ ಸಂಖ್ಯೆ :2: ನಕಾರಾತ್ಮಕವಾಗಿ

ಅಂಶ ಸಂಖ್ಯೆ :3: ನಕಾರಾತ್ಮಕವಾಗಿ

ಅಂಶ ಸಂಖ್ಯೆ :4: ನಕಾರಾತ್ಮಕವಾಗಿ

ಅಂಶ ಸಂಖ್ಯೆ :5: ನಕಾರಾತ್ಮಕವಾಗಿ

ಅಂಶ ಸಂಖ್ಯೆ :6: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ.

## ಕಾರಣಗಳು

**12. ಅಂಶ ಸಂಖ್ಯೆ: 1 ರಿಂದ 5:-** ಅಂಶ 1 ರಿಂದ 5 ಇವುಗಳು ಒಂದನ್ನೊಂದು ಅವಲಂಬಿಸಿದ್ದು, ಅವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚೆರ್ಚೆ ಹಾಗೂ ವಿಮರ್ಶೆಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

**13.** ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಮಾಡಲಾದ ಅಪಾದನೆಯನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲಿದ್ದು

ಅದಕ್ಕಾಗಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತನ ಮೇಲಿರುವ ಆರೋಪಗಳನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ.

**14.** ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಈ ಪ್ರಕರಣದ ಪಿರ್ಯಾದು, ನೊಂದ ಮತ್ತು ಪಂಚನಾಮೆ ಸಾಕ್ಷಿದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮುಖ್ಯ ಸಂಗತಿಗಳೆಂದರೆ, ಚಾಸಾ-2 ಮತ್ತು ಚಾಸಾ-3 ರವರು ಪರಿಚಯ ಇದ್ದಾರೆ ಚಾಸಾ-4 ನನ್ನ ತಂದೆ, ಚಾಸಾ-5 ನನ್ನ ತಾಯಿ, ಚಾಸಾ-6 ರಿಂದ 10 ರವರ ಪರಿಚಯ ಇದೆ. ಆರೋಪಿಗಳ ಪರಿಚಯ ಇದೆ. ಆರೋಪಿ ಮತ್ತು ನಾನು ಈ ಹಿಂದೆ ಪತಿ ಪತ್ನಿಯರಾಗಿದ್ದು, ನ್ಯಾಯಾಲಯದಲ್ಲಿ ಪರಸ್ಪರ ವಿಚ್ಛೇದನ ಪಡೆದುಕೊಂಡಿರುತ್ತೇವೆ. ಆರೋಪಿ ನನಗೆ ಯಾವುದೇ ದೈಹಿಕ ಮಾನಸಿಕ ಹಿಂಸೆ ನೀಡಿರುವುದಿಲ್ಲ. ಆರೋಪಿ ನನಗೆ ಯಾವುದೇ ಹಲ್ಲೆ ಮಾಡಿಲ್ಲ ಕೊಲೆ ಬೆದರಿಕೆ ಹಾಕಿಲ್ಲ. ಆರೋಪಿ ನನಗೆ ಯಾವುದೇ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುವುದಿಲ್ಲ. ಈಗ ಸುಮಾರು ವರ್ಷಗಳ ಹಿಂದೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-1 ದೂರಿನಿಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ, ನಿಪಿ-2 ಮಹಜರ್ ನಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ ಮಾಡಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಮೇರೆಗೆ ಪಾಟಿ ಸವಾಲಿಗೊಳಪಡಿಸಿದರು ಸಹ ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಪ್ರಾಸಾ-1 ರವರಿಂದ ಹೊರತೆಗೆಯುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ.

**15.** ಮುಂದುವರೆದು ಅಭಿಯೋಜನೆಯು ಈ ಪ್ರಕರಣದ ಪಂಚನಾಮೆ ಸಾಕ್ಷಿದಾರರಾದ ಚಾಸಾ-4 ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮುಖ್ಯ ಸಂಗತಿಗಳೆಂದರೆ, ಚಾಸಾ-1 ನನ್ನ ಮಗಳು ಚಾಸಾ-2 ನನ್ನ ಹೆಂಡತಿ, ಚಾಸಾ-6 ರಿಂದ 10 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಆರೋಪಿ ಮತ್ತು ನನ್ನ ಮಗಳು ಈ ಹಿಂದೆ ಪತಿ ಪತ್ನಿಯರಾಗಿದ್ದು, ನ್ಯಾಯಾಲಯದಲ್ಲಿ ಪರಸ್ಪರ ವಿಚ್ಛೇದನ ಪಡೆದುಕೊಂಡಿರುತ್ತಾರೆ. ಆರೋಪಿ ತನಗೆ ಯಾವುದೇ ವರದಕ್ಷಿಣೆ ತರುವಂತೆ ದೈಹಿಕ ಮಾನಸಿಕ ಹಿಂಸೆ ನೀಡಿದ ಬಗ್ಗೆ ನನಗೆ ನನ್ನ ಮಗಳು ಯಾವುದೇ ಮಾಹಿತಿ ನೀಡಿರುವುದಿಲ್ಲ, ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಮೇರೆಗೆ ಪಾಟಿ ಸವಾಲಿಗೊಳಪಡಿಸಿದರು ಸಹ ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಪ್ರಾಸಾ-2 ರವರಿಂದ ಹೊರತೆಗೆಯುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ.

**16.** ಮುಂದುವರೆದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ಮತ್ತು 2 ರವರು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರೂ ಸಹ ಇತರೆ ಸಾಕ್ಷಿದಾರರಿಂದ ಪ್ರಕರಣವನ್ನು ಸಾಭೀತು ಪಡಿಸಬಹುದೆಂದು ಹೇಳಿ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು ಇತರೆ ಸಾಕ್ಷಿದಾರರಿಗೆ ಸಮನ್ಸ ಹೊರಡಿಸಬೇಕೆಂದು ಕೋರಿಕೆಯನ್ನು ಮಾಡಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಪ್ರಾಸಾ 1 ಮತ್ತು ಪ್ರಾಸಾ-2 ರವರು ಈ ಪ್ರಕರಣದ ಪಿರ್ಯಾಧಿ, ಪ್ರತ್ಯೆಕ್ಷ, ನೊಂದ ಮತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಅದೇ ರೀತಿ ಈ ಪ್ರಕರಣದ ಇನ್ನುಳಿದ ಸಾಕ್ಷಿದಾರರಾದ ಪ್ರತ್ಯೆಕ್ಷ ಮತ್ತು ಪಂಚನಾಮೆ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದರು ಸಹ ಯಾವುದೇ ಪ್ರಯೋಜನೆ ಆಗುವುದಿಲ್ಲ. ಆದ್ದರಿಂದ ಇನ್ನೂಳಿದ ಪ್ರತ್ಯೆಕ್ಷ ಮತ್ತು ಪಂಚನಾಮೆ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆನ್ನುವ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಲಾಯಿತು.

**17.** ಅದೇ ರೀತಿ ಪ್ರಾಸಾ-1 ಮತ್ತು 2 ರವರ ಸಾಕ್ಷ್ಯದಲ್ಲಿ ಆರೋಪಿತನನ್ನು ಶಿಕ್ಷೆಗೆ ಒಳಪಡಿಸುವ ಮತ್ತು ಆರೋಪಿತನಿಗೆ ವ್ಯತಿರಿಕ್ತವಾಗುವ ಯಾವುದೇ ಸಾಕ್ಷ್ಯ ಇರುವುದಿಲ್ಲ. ಆದ್ದರಿಂದ ನ್ಯಾಯಾಲಯವು ಕಲಂ.313ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳದೆ ಕೈಬಿಟ್ಟಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಆರೋಪಿತನು ಮೇಲ್ಕಂಡ ಆಪಾದನೆಯನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ, ನಂಬಲು ಅರ್ಹವಾದ ಹಾಗೂ ಕಾನೂನು ಬದ್ದವಾದ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಂಶ

ಸಂಖ್ಯೆ 1 ರಿಂದ 5 ಗಳನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**18. ಅಂಶ ಸಂಖ್ಯೆ :6:** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

**ಆದೇಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.248(1)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ ಆರೋಪಿತನ ವಿರುದ್ದ ಮಾಡಲಾದ ಭಾ.ದ.ಸಂ. ಕಲಂ. 498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿತನನ್ನು ದೋಷಮುಕ್ತಗೊಳಿಸಿ ನಿರ್ದೋಷಿತನೆಂದು ನಿರ್ಣಯಿಸಿ ಅವನ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿ ಮತ್ತು ಅವನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ದಂ. ಪ್ರ. ಸಂ ಕಲಂ 437(ಎ) ರ ಅಡಿಯಲ್ಲಿ 6 ತಿಂಗಳ ವರೆಗೆ ಜಾರಿಯಲ್ಲಿರುತ್ತವೆ.

(ಶ್ರೀಘ್ರಲಿಪಿಗಾರಳಿಗೆ ಗಣಕೀಕರಣದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು, ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ 30ನೇ ಜೂನ್ 2026 ರಂದು ಘೋಷಿಲಾಯಿತು)

**(ಶ್ರೀ. ವೆಂಕಟೇಶ. ಎನ್)**
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ಅನುಸೂಚಿ**

**1. ಅಭಿಯೋಜನೆ ಪರ ನುಡಿದಂತಹ ಸಾಕ್ಷಿಗಳ ವಿವರಃ**

ಪ್ರಾಸಾ-1 : ಶ್ರೀಮತಿ. ಅನುಷಾ ಬೈಟಿಪುಲಿ ಬಿನ್ ಬಣ್ಣಪ್ಪ ಬೈಟಿ

ಪ್ರಾಸಾ-2 : ಶ್ರೀ. ಬಣ್ಣಪ್ಪ ಬೈಟಿ ಪುಲಿ ಬಿನ್ ನರಸಪ್ಪ

**2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ವಿವರಃ**

| | | |
|---|---|---|
| ನಿಪಿ-1 | : | ದೂರು. |
| ನಿಪಿ-1ಎ | : | ಪ್ರಾಸಾ-1 ರವರ ಸಹಿ |
| ನಿಪಿ-2 | : | ಮಹಜರ್ |
| ನಿಪಿ-2ಎ | : | ಪ್ರಾಸಾ-1 ರವರ ಸಹಿ |
| ನಿಪಿ-3 | : | ವಿವಾಹ ಆಮಂತ್ರಣ ಪತ್ರಿಕೆ |
| ನಿಪಿ-4 | : | ಪ್ರಾಸಾ-2 ರವರ ಹೇಳಿಕೆ |

**3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳು ವಿವರ:**

**- ಇಲ್ಲ -**

**4. ಆರೋಪಿತನ ಪರ ವಿಚಾರಣೆಗೊಳಪಡಿಸಿದ ಸಾಕ್ಷಿದಾರರ ವಿವರ:**

**- ಇಲ್ಲ -**

**5. ಆರೋಪಿತನ ಪರ ಗುರುತಿಸಲಾದ ದಾಖಲೆಗಳ ವಿವರಃ**

**- ಇಲ್ಲ -**

**6. ಆರೋಪಿತನ ಪರ ಗುರುತಿಸಲಾದ ಮುದ್ದೆಮಾಲುಗಳು ವಿವರ:**

**- ಇಲ್ಲ -**

**(ಶ್ರೀ. ವೆಂಕಟೇಶ. ಎನ್)**
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**(ಬಹಿರಂಗ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರತ್ಯೇಕವಾದ ಆದೇಶದೊಂದಿಗೆ ಘೋಷಿಸಲಾಗಿದೆ.)**

**ಆದೇಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.248(1)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ ಆರೋಪಿತನ ವಿರುದ್ದ ಮಾಡಲಾದ ಭಾ.ದ.ಸಂ. ಕಲಂ. 498(ಎ), 323, 506 ಮತ್ತು ವರದಕ್ಷಿಣೆ ನಿಷೇದ ಕಾಯ್ದೆ ಕಲಂ.3 & 4 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿತನನ್ನು ದೋಷಮುಕ್ತಗೊಳಿಸಿ ನಿರ್ದೋಷಿತನೆಂದು ನಿರ್ಣಯಿಸಿ ಅವನ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿ ಮತ್ತು ಅವನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ದಂ. ಪ್ರ. ಸಂ ಕಲಂ

437(ಎ) ರ ಅಡಿಯಲ್ಲಿ 6 ತಿಂಗಳ ವರೆಗೆ ಜಾರಿಯಲ್ಲಿರುತ್ತವೆ.

**(ಶ್ರೀ. ವೆಂಕಟೇಶ. ಎನ್)**
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.